# ಬಾಲ್ಯ ವಿವಾಹ ನಿಷೇಧ ಕಾಯ್ದೆ – 2006 ರ ಪ್ರಕಾರ ಬಾಲ್ಯವಿವಾಹ ಮಾಡುವುದು ಅಪರಾಧ.

18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ, 21 ವರ್ಷದೊಳಗಿನ
ಗಂಡು ಮಕ್ಕಳಿಗೆ ಮದುವೆ ಮಾಡುವುದು, ಮಾಡಿಸುವುದು
ಅದಕ್ಕೆ ಸಾಕ್ಷಿಯಾಗುವುದು, ಭಾಗವಹಿಸುವುದು 'ಶಿಕ್ಷಾರ್ಹ ಅಪರಾಧ'.
**ಪೂಜಾರಿ ಸೇರಿದಂತೆ ಸಂಬಂಧಪಟ್ಟವರಿಗೆಲ್ಲಾ**
**2 ವರ್ಷ ಜೈಲು, 1 ಲಕ್ಷ ರೂ ದಂಡ**



## ಬಾಲ್ಯವಿವಾಹದ ದುಷ್ಪರಿಣಾಮಗಳು

- ಮದುವೆ ಆಗಿ ಕುಟುಂಬ ನಡೆಸಲು ಸಿದ್ಧರಾಗಿರುವುದಿಲ್ಲ.
- ಭೌದ್ಧಿಕವಾಗಿ, ಮಾನಸಿಕವಾಗಿ, ಶಾರೀರಿಕವಾಗಿ, ಸಾಮಾಜಿಕವಾಗಿ ಕುಟುಂಬದ ಹೊರೆ ಹೊರಲು ಸಮರ್ಥರಾಗಿರುವುದಿಲ್ಲ.
- ಗರ್ಭಧರಿಸಲು "ಗರ್ಭಕೋಶ" ಪೂರ್ಣ ಬೆಳವಣಿಗೆಯಾಗಿರುವುದಿಲ್ಲ.
- ಗರ್ಭಪಾತದ ಸಾಧ್ಯತೆ ಹೆಚ್ಚು
- ಅಪೌಷ್ಠಿಕತೆಯಿರುವ 'ಮಗುವಿನ' ಜನನದ ಸಾಧ್ಯತೆ.
- ಮಕ್ಕಳು ಅಂಗವಿಕಲರಾಗುವ ಸಂಭವ.
- ಬೇಗ ವಯಸ್ಸಾದವರಂತೆ ಕಾಣುತ್ತಾರೆ.
- ಹೆಚ್ಚು ಕೆಲಸ ಮಾಡಲು ಸಾಧ್ಯವಾಗುವುದಿಲ್ಲ.
- ಅತ್ಯಂತ ಕಷ್ಟಕರವಾದ ಹೆರಿಗೆ ಮತ್ತು ಅತಿಯಾದ ರಕ್ತ ಸ್ರಾವ.
- ಮೂಢನಂಬಿಕೆಗೆ ಕುಟುಂಬದ ಮತ್ತು ಮಕ್ಕಳ ಜೀವನ ಹಾಳಾಗುತ್ತದೆ.

### ☛ ನಿಮಗೆ ತಿಳಿದಿರಲಿ

- 21% ತಾಯಂದಿರ ಮರಣ (ರಾಜ್ಯದಲ್ಲಿ)
- ಶಿಶು ಮರಣ ಪ್ರಮಾಣ (ರಾಯಚೂರು ಜಿಲ್ಲೆಯಲ್ಲಿ 59 / 1000 ಕ್ಕೆ)
- ಸುರಕ್ಷಿತ ಹೆರಿಗೆ ಕೇವಲ 48% (ರಾಯಚೂರು ಜಿಲ್ಲೆ)
- ರಾಯಚೂರು ಜಿಲ್ಲೆಯಲ್ಲಿ 39% "ಬಾಲ್ಯವಿವಾಹ ನಡೆಯುತ್ತಿದೆ,

**ಇದನ್ನು ನಿಲ್ಲಿಸೋಣ**

## ಬಾಲ್ಯವಿವಾಹ ಎಂದರೇನು ?

- ಯಾವುದೇ 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಅಥವಾ 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆ ಮಾಡುವುದು ಬಾಲ್ಯವಿವಾಹ ಎಂದೆನಿಸಿಕೊಳ್ಳುತ್ತದೆ.

### ☛ ಕಾನೂನು ಏನು ಹೇಳುತ್ತೆ.

- ಕಾನೂನು ಇಂತಹ ಮದುವೆ ಮಾಡುವುದನ್ನು ನಿಷೇಧಿಸಿದೆ. ಒಂದು ವೇಳೆ ಮಾಡಿದಲ್ಲಿ ವಧುವರರ ಕುಟುಂಬದವರ ಮೇಲೆ, ಸಂಘಟಕರ ಮೇಲೆ, ಪೂಜಾರಿ, ನಿರ್ದೇಶಿಸಿದವರು, ನೆರವೇರಿಸಿದವರು, ಕುಮ್ಮಕ್ಕು ನೀಡಿದವರು ಹಾಗೂ ಸಂಬಂಧಪಟ್ಟವರ ಮೇಲೆ, ಪ್ರಕರಣ ದಾಖಲು. ಅವರೆಲ್ಲರಿಗೂ 1 ಲಕ್ಷ ರೂ ದಂಡ, 2 ವರ್ಷ ಜೈಲು ( ಸೆಕ್ಷನ್–9,10,11).

### ☛ ಪ್ರಕರಣ ದಾಖಲು ಹೇಗೆ ?

- ಬಾಲ್ಯವಿವಾಹ ನಿಷೇಧಾಧಿಕಾರಿಗಳು ನೀಡಿದ ಹೇಳಿಕೆಯ ಆಧಾರದ ಮೇಲೆ ಸಂಘಟಕರು ಪೋಷಕರು, ಕುಟುಂಬದವರು, ಭಾಗಿಯಾದವರು ಹಾಗೂ ಪೂಜಾರಿ ಮೇಲೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಕೋರ್ಟಿಗೆ ಹಾಜರುಪಡಿಸಲಾಗುವುದು.

### ☛ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಯಾರು ?

- ಜಿಲ್ಲಾಧಿಕಾರಿಗಳು, ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ತಹಶೀಲ್ದಾರರು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು (ಸಿಡಿಪಿಒ), ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಂದಾಯ ನಿರೀಕ್ಷಕರು, ಎಲ್ಲಾ ಗ್ರಾಮ ಲೆಕ್ಕಾಧಿಕಾರಿಗಳು.
- ಈ ಕಾಯ್ದೆಯಡಿ ಎಲ್ಲಾ ಅಪರಾಧಗಳು ವಿಚಾರಣಾರ್ಹ ಮತ್ತು ಜಾಮೀನು ರಹಿತ(ಸೆಕ್ಷನ್–15)

# ಸಾಮೂಹಿಕ ಮದುವೆಯಲ್ಲಿ ಬಾಲ್ಯವಿವಾಹ ನಡೆದಲ್ಲಿ ಸಂಘಟಕರೇ ಮುಖ್ಯ ಅಪರಾಧಿಗಳು

**ತಾವು ಸಾಮೂಹಿಕ ಮದುವೆ ಮಾಡಲು, ಭಾಗಿಯಾಗಲು ಅಥವಾ ನಿಮ್ಮ ಕುಟುಂಬದ ಸದಸ್ಯರ ಮದುವೆ ಮಾಡಲು ಹೊರಟಿದ್ದರೆ ಈ ಕೆಳಗಿನ ಎಲ್ಲಾ ನೀತಿ, ನಿಯಮಗಳನ್ನು ಪಾಲಿಸಿ.**

**ತಪ್ಪಿದಲ್ಲಿ ಕಾನೂನಿನ ಬಲೆಗೆ ಸಿಲುಕುತ್ತೀರಿ, ಎಚ್ಚರಿಕೆ !**



☛ ಸಾಮೂಹಿಕ ಮದುವೆ ಮಾಡುವ ಸಂಘಟಕರು, ಸಂಸ್ಥೆಗಳು ಕನಿಷ್ಠ 3 ತಿಂಗಳ ಮುಂಚಿತವಾಗಿ ನಿಗಧಿತ ನಮೂನೆಯಲ್ಲಿ ಸ್ಥಳೀಯ ತಹಶೀಲ್ದಾರರು/ ಶಿಶು ಅಭಿವೃದ್ಧಿ ಯೋಜನಾಧಿಕಾರಿಗೆ ಅರ್ಜಿ ಸಲ್ಲಿಸಿ ಲಿಖಿತ ಅನುಮತಿ ಪಡೆಯಬೇಕು.

☛ ಸಾಮೂಹಿಕ ಮದುವೆಯಲ್ಲಿ ಮದುವೆಯಾಗುವ ವಧು ವರರ ಬಗ್ಗೆ ಈ ಕೆಳಗಿನ ಎಲ್ಲಾ ದಾಖಲೆಗಳನ್ನು ಪಡೆದು 1 ತಿಂಗಳು ಮುಂಚಿತವಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕು.

☛ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ ದೃಢೀಕರಿಸಿದ ಜೋಡಿಗಳಿಗೆ ಮಾತ್ರ ಮದುವೆ ಅವಕಾಶ ದೊರೆಯುತ್ತದೆ.

☛ ಸ್ಥಳೀಯ ಪೊಲೀಸ್ ಠಾಣೆಗೆ ಲಿಖಿತ ವಿವರ ಇರುವ ಮಾಹಿತಿ ನೀಡಬೇಕು.

**ಸಲ್ಲಿಸಬೇಕಾದ ದಾಖಲೆಗಳು :**

1. ವಧು ವರರು ಅಥವಾ ಕುಟುಂಬದವರು ಸಂಸ್ಥೆಗೆ ಸಲ್ಲಿಸಿದ ಅರ್ಜಿ.
2. ವಾಸಸ್ಥಳ ದೃಢೀಕರಣ ಪತ್ರ.
3. ವಯಸ್ಸಿನ ದೃಢೀಕರಣ ಪತ್ರ.( ಹೆಣ್ಣಿಗೆ 18 ವರ್ಷ ಮತ್ತು ಗಂಡಿಗೆ 21 ವರ್ಷ ಕಡ್ಡಾಯವಾಗಿ ಪೂರ್ಣವಾಗಿರಬೇಕು.)
4. ಭಾವಚಿತ್ರ. (3 ಪ್ರತಿ ವಧು – ವರರದ್ದು)

☛ ಮದುವೆಗೆ ಮೂಲ ಜನನ ಪ್ರಮಾಣ ಪತ್ರ, ಶಾಲೆಯಲ್ಲಿ ಮುಖ್ಯ ಶಿಕ್ಷಕರು ನೀಡಿದ ವಯಸ್ಸಿನ ದೃಢೀಕರಣ ಪತ್ರ, ಜಿಲ್ಲಾ ಶಸ್ತ್ರಚಿಕಿತ್ಸಕರು (ಸರ್ಜನ್) ಅಥವಾ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯರು ನೀಡಿದ ವಯಸ್ಸಿನ ದೃಢೀಕರಣ ಪತ್ರಗಳು "ಮಾತ್ರ" ಅರ್ಹವಾಗಿರುತ್ತವೆ.

☛ ಪಿಡಿಓ, ಪಂಚಾಯಿತಿ ಕಾರ್ಯದರ್ಶಿಗಳು, ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ನಗರಸಭೆ ಅಧ್ಯಕ್ಷರು, ಸದಸ್ಯರು ಹಾಗೂ ಇತರೆ ಜನ ಪ್ರತಿನಿಧಿಗಳು, ಇತರ ಯಾವುದೇ ಅಧಿಕಾರಿಗಳು ಅಥವಾ ವೈದ್ಯರು ನೀಡಿದ ವಯಸ್ಸಿನ ದೃಢೀಕರಣ ಪತ್ರ 'ಮದುವೆಗೆ ಮಾನ್ಯವಾಗುವುದಿಲ್ಲ' ಹಾಗೂ ಅರ್ಹವಲ್ಲ.

**18 ವರ್ಷದೊಳಗಿನ ಬಾಲಕಿಗೆ, 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆ (ಬಾಲ್ಯವಿವಾಹ) ನಿಗಧಿಯಾಗಿರುವುದು ತಿಳಿದುಬಂದಲ್ಲಿ ತಕ್ಷಣ ಈ ಕೆಳಕಂಡ ಇಲಾಖೆಗಳಿಗೆ ದೂರು ಕೊಡಿ. "ಮಕ್ಕಳ ಬಾಲ್ಯ, ಬದುಕು ಉಳಿಸಿ" (18 ವರ್ಷದೊಳಗಿನವರೆಲ್ಲರೂ ಮಕ್ಕಳು)**

**ಪ್ರಕಟಣೆ :** ಜಿಲ್ಲಾಡಳಿತ(229011), ಜಿಲ್ಲಾ ಪಂಚಾಯತ್(228448), ಪೊಲೀಸ್ ಇಲಾಖೆ (235100/235001), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(226292) ಮತ್ತು ಯುನಿಸೆಫ್ "ಮಕ್ಕಳ ಸಂರಕ್ಷಣಾ" ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ ರಾಯಚೂರು. (230610).